ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
ಸಿ.ಸಿ.85/2022

| | | |
|---|---|---|
| ಸಾಕ್ಷಿದಾರರ ಹೆಸರು : | ದಿನೇಶ್ | ಪಿ.ಡಬ್ಯೂ.2 |
| ತಂದೆಯ ಹೆಸರು : | ಚನ್ನೇಗೌಡ | ಸಿ.ಡಬ್ಯೂ.2 |
| ವಯಸ್ಸು : | 46 ವರ್ಷ | |
| ವೃತ್ತಿ : | ಕೂಲಿ ಕೆಲಸ | |
| ವಾಸ : | ಚಿಕ್ಕಕುರುಬರಹಳ್ಳಿ | |

ದಿನಾಂಕಃ 05-02-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-

ಚಾಸಾ-3 ರವರು ನನ್ನ ಸಹೋದರ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇಲ್ಲ. ನಿರ್ದಿಷ್ಟ ದಿನಾಂಕ ನೆನಪಿಲ್ಲ ಆದರೆ ಈಗ್ಗೆ ಎರೆಡೂವರೆ ವರ್ಷಗಳ ಹಿಂದೆ ನಾನು ಮತ್ತು ಚಾಸಾ-3 ರವರು ಕೆಲಸ ಮುಗಿಸಿಕೊಂಡು ಮಧ್ಯಾಹ್ನಃ03.00 ರಿಂದ 03.30 ಗಂಟೆ ಸಮಯದಲ್ಲಿ ಚಿಕ್ಕಕುರುಬರಹಳ್ಳಿ ಹತ್ತಿರ ಬರುತ್ತಿದ್ದೆವು. ಪುಷ್ಪಗಿರಿ ಹಾರ್ಡ್ ವೇರ್ ಎದುರುಗಡೆ ಪೊಲೀಸರು ಬಂದಿದ್ದರು. ಪೊಲೀಸರ ಜೊತೆ ಮತ್ತೊಬ್ಬರು ಇದ್ದರು. ಆತ ಪೊಲೀಸರಿಗೆ ಜಾಗ ತೋರಿಸುತ್ತಿದ್ದ. ಆತ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದವನ ತಮ್ಮ ಎಂದು ತಿಳಿಯಿತು. ಸದರಿ ಜಾಗದಲ್ಲಿ ಪೊಲೀಸರು ಫೋಟೋ ತೆಗೆದು 2 ಸಹಿಗಳನ್ನ ನನ್ನಿಂದ ಪಡೆದಿರುತ್ತಾರೆ. ಸಾಕ್ಷಿಗೆ ನೋಟೀಸ್ ಮತ್ತು ಮಹಜರ್ ಅನ್ನ ತೋರಿಸಲಾಗಿ ಅವುಗಳ ಮೇಲೆ ಇರುವ ತನ್ನ ಸಹಿಗಳನ್ನ ನೋಡಿ

ಗುರುತಿಸಿದ್ದಾರೆ. ಅವುಗಳನ್ನು ನಿಪಿ-9 ಮತ್ತು ನಿಪಿ-10 ಎಂದು ಮತ್ತು ಸಾಕ್ಷಿಯ ಸಹಿಗಳನ್ನು ನಿಪಿ-9(ಎ) ಮತ್ತು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಫೋಟೋಗಳ ತೋರಿಸಲಾಗಿ ಅವುಗಳನ್ನ ನೋಡಿ ಗುರುತಿಸಿದ್ದಾರೆ. ಅವುಗಳನ್ನ ನಿಪಿ-11 ಮತ್ತು ನಿಪಿ-12 ಎಂದು ಗುರುತಿಸಲಾಯಿತು. ನಿಪಿ-11 ರಲ್ಲಿ ಕಾಣುವ ಜಾಗ ಪುಷ್ಪಗಿರಿ ಹಾರ್ಡ್ ವೇರ್ ಎದುರುಗಡೆ ಇರುವ ಜಾಗ ಆಗಿರುತ್ತದೆ ಮತ್ತು ಅದರಲ್ಲಿ ಪುಷ್ಪಗಿರಿ ಹಾರ್ಡ್ ವೇರ್ ಕಾಣಿಸುತ್ತಿದೆ. ನಿಪಿ-12 ರಲ್ಲಿ ಕಾಣುವ ಜಾಗ ಬೈಪಾಸ್ ರಸ್ತೆ ಆಗಿದ್ದು ಗಾಯಾಳುವಿನ ಸಹೋದರ ಅದೇ ಜಾಗದಲ್ಲಿ ಘಟನೆ ಸಂಭವಿಸಿರುವುದಾಗಿ ತೋರಿಸಿದ್ದಾರೆ ಮತ್ತು ಅದೇ ಜಾಗದಲ್ಲಿ ಪೊಲೀಸರು ಮಹಜರ್ ಮೇಲೆ ನಮ್ಮ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ಮತ್ತೊಂದು  ಮಹಜರ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನ ನಿಪಿ-13  ಎಂದು ಮತ್ತು ಸಾಕ್ಷಿಯ ಸಹಿಯನ್ನ ನಿಪಿ-13(ಎ) ಎಂದು ಗುರುತಿಸಲಾಯಿತು. ನಿಪಿ-13 ರ ಕಾಲಕ್ಕೆ 2 ಫೋಟೋ ತೆಗೆದಿದ್ದು ಅವುಗಳನ್ನ ನೋಡಿ ಗುರುತಿಸಿದ್ದೇನೆ. ಅವುಗಳನ್ನ ನಿಪಿ-14 ಮತ್ತು ನಿಪಿ-15 ಎಂದು ಗುರುತಿಸಲಾಯಿತು. ನಿಪಿ-14 ರಲ್ಲಿ ಕಾಣುವ ಜಾಗ ಪುಷ್ಪಗಿರಿ ಹಾರ್ಡ್ ವೇರ್ ಎದುರುಗಡೆ ಇರುವ ಜಾಗ ಆಗಿದ್ದು ನಿಪಿ-15 ರಲ್ಲಿ ಕಾಣುವ ಜಾಗ ಬೈಪಾಸ್ ರಸ್ತೆ ಆಗಿರುತ್ತದೆ. ಅದೇ ದಿನ ಸಂಜೆ ಪೊಲೀಸರು ಠಾಣೆಗೆ ಬರಲು ಹೇಳಿದ್ದರು, ಠಾಣೆಗೆ ಹೋಗಿದ್ದಾಗ ಠಾಣಾ ಆವರಣದಲ್ಲಿ ಬೈಕ್ ಇದ್ದು ಅದರ ಮುಂದೆ ಒಂದು ಫೋಟೋ ತೆಗೆದು ಸಹಿ ಪಡೆದರು. ಸಾಕ್ಷಿಗೆ ಅಮಾನತ್ತು ಮಹಜರ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-16 ಎಂದು

ಮತ್ತು ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ನಿಪಿ-16 ರ ಕಾಲಕ್ಕೆ ತೆಗೆದ ಫೋಟೋವನ್ನ ನೋಡಿ ಗುರುತಿಸಿದ್ದೇನೆ. ಅದನ್ನ ನಿಪಿ-17 ಎಂದು ಗುರುತಿಸಲಾಯಿತು. ನಿಪಿ-17 ರಲ್ಲಿ ಕಾಣುವ ಜಾಗ ನಗರ ಪೊಲೀಸ್ ಠಾಣೆ ಆವರಣ ಆಗಿದ್ದು ಅದರಲ್ಲಿ ಬೈಕು ಇದೆ. ನಿಪಿ-11, 12, 14, 15 ಮತ್ತು 17 ರ ಫೋಟೋಗಳಲ್ಲಿ ನಾನು, ಚಾಸಾ-3, ಪೊಲೀಸರು ಇದ್ದೇವೆ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-

ದಿಃ11.05.2020 ರಂದು ಮೇಲೆ ಹೇಳಿದ ಮಹಜರ್ ಕ್ರಮ ಜರುಗಿಸಲಾಗಿದೆ ಎಂದರೆ ಸಾಕ್ಷಿ ಈಗ ದಿನಾಂಕ ನೆನಪಿಲ್ಲ ಎನ್ನುತ್ತಾರೆ. ನಿಪಿ-10 ರ ಮಹಜರ್ ಅನ್ನ 12.45 ರಿಂದ 01.45 ಗಂಟೆಯವರೆಗೆ ಜರುಗಿಸಲಾಯಿತು ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ ಎನ್ನುತ್ತಾರೆ. ನಿಪಿ-10 ಕ್ಕೆ ಶ್ರೇಯಸ್ ಎಂಬಾತ ಸ್ಥಳ ತೋರಿಸಿದ ಎಂದರೆ ಸರಿ. ನಿಪಿ-13 ರ ಮಹಜರ್ ಅನ್ನ ಅದೇ ದಿನ 03.15 ರಿಂದ 03.45 ರವರೆಗೆ ಬರೆಯಲಾಯಿತು ಎಂದರೆ ಸಾಕ್ಷಿ ಸಮಯ ಈಗ ನೆನಪಿಲ್ಲ ಎನ್ನುತ್ತಾರೆ. ನಿಪಿ-13 ರ ಮಹಜರ್ ಕಾಲಕ್ಕೆ ಆರೋಪಿತರು ಸ್ಥಳ ತೋರಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ನಿಪಿ-14 ಮತ್ತು ನಿಪಿ-15 ರಲ್ಲಿ ಆರೋಪಿತರೂ ಸಹ ಇದ್ದಾರೆ ಎಂದರೆ ಸಾಕ್ಷಿ ಅವರ ಮುಖ ಸರಿಯಾಗಿ ಕಾಣಿಸುತ್ತಿಲ್ಲ ಎನ್ನುತ್ತಾರೆ. ನಿಪಿ-16 ರ ಮಹಜರ್ ಅನ್ನ ಬೆಳಗ್ಗೆಃ11.45 ರಿಂದ 12.15 ರವರೆಗೆ ಬರೆಯಲಾಯಿತು

ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ನಿಪಿ-17 ರ ಫೋಟೋದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಇದ್ದಾರೆ ಎಂದರೆ ಸಾಕ್ಷಿ ಅವರು ಮಾಸ್ಕ್ ಹಾಕಿದ್ದು ಅವರನ್ನ ಗುರುತಿಸಲು ಸಾಧ್ಯವಿಲ್ಲ ಎನ್ನುತ್ತಾರೆ. ನಿಪಿ-16 ರ ಕಾಲಕ್ಕೆ ಬೈಕ್ ಅನ್ನ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಫೋಟೋ ತೆಗೆದುಕೊಂಡರು ಎನ್ನುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಆರೋಪಿಗೆ ಸಹಾಯ ಮಾಡಬೇಕೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ ಯು.ಹೆಚ್.ಎಂ. ವಕೀಲರಿಂದಃ-</u>

ನಿಪಿ-10, 13 ಮತ್ತು 16 ರ ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡು ಎಂದು ಕೇಳಿದ್ದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ. ಪೊಲೀಸರು ಯಾವ ಉದ್ದೇಶಕ್ಕಾಗಿ ಫೋಟೋಗೆ ನನ್ನನ್ನ ನಿಂತುಕೊಳ್ಳಲು ಹೇಳಿದರು ಎಂದು ನನಗೆ ಮಾಹಿತಿ ಇಲ್ಲ. ಬರವಣಿಗೆಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ಪೊಲೀಸರು ನಿಮಗೆ ಬನ್ನಿ ಎಂದು ನೋಟೀಸ್ ಕೊಟ್ಟಿಲ್ಲ ಎಂದರೆ ಸಾಕ್ಷಿ ಎರಡು ಮೂರು ಬಾರಿ ಕರೆದರು ಎನ್ನುತ್ತಾರೆ. ನನಗೆ ಬರವಣಿಗೆ ಮೂಲಕ ಯಾವುದೇ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿ. ಪೊಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ಬೈಕ್ ಅನ್ನ ಅಮಾನತ್ ತುಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿ ನಮ್ಮನ್ನ ಬೈಕ್ ಪಕ್ಕ ನಿಲ್ಲಿಸಿ ಫೋಟೋ ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ